**ದಿನಾಂಕಃ 21-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನೀವು ಎಷ್ಟು ವರ್ಷದಿಂದ ಬೊಂಬುಸಾರದಲ್ಲಿ ವಾಸವಾಗಿರುತ್ತೀರಾ ಎಂದರೇ ಸಾಕ್ಷಿ 30 ವರ್ಷಗಳಿಂದ ವಾಸವಾಗಿದ್ದೇವೆ ಎಂದು ನುಡಿದಿರುತ್ತಾರೆ. ಅದಕ್ಕೂ ಹಿಂದೆ ನಾವು ಭದ್ರಾವತಿಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ಶಿವಣ್ಣನವರ ಕುಟುಂಬದವರ ಜೊತೆಗೆ 25 ವರ್ಷಗಳಿಂದ ಪರಿಚಯವಿದೆ ಎಂದರೆ ಸರಿ. ಗಂಗಹೊನ್ನಯ್ಯನವರು ಶಿವಣ್ಣನವರ ತಂದೆ ಆಗಿದ್ದು, ಸದರಿಯವರಿಗೆ ಮೂರು ಜನ ಗಂಡು ಮಕ್ಕಳಿದ್ದು , ಹೆಣ್ಣು ಮಕ್ಕಳು ಎಷ್ಟು ಜನ ಎಂದು ನನಗೆ ತಿಳಿದಿರುವುದಿಲ್ಲ. ಗಂಗಹೊನ್ನಯ್ಯ ನವರಿಗೆ ಎಷ್ಟು ಜನ ಮಕ್ಕಳಿದ್ದಾರೆಂದು ಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ಗಂಗಹೊನ್ನಯ್ಯನವರಿಗೆ ರೇವಣ್ಣ ಎಂಬ ದೊಡ್ಡ ಮಗ ಇದ್ದು, ಇನ್ನೊಬ್ಬ ಕೃಷ್ಣಪ್ಪ ಎನ್ನುವ 2ನೇ ಮಗ, 3ನೇಯವರು ಶಿವಣ್ಣ ಆಗಿರುತ್ತಾರೆಂದು ನುಡಿದಿರುತ್ತಾರೆ. ಗಂಗಹೊನ್ನಯ್ಯನವರಿಗೆ ಒಟ್ಟು ಎಷ್ಟು ಎಕರೆ ಜಮೀನು ಇದೆ ಎನ್ನುವ ಮಾಹಿತಿ ನನಗೆ ಇಲ್ಲ.

ಗಂಗಹೊನ್ನಯ್ಯನವರಿಗೆ ಶಾಂತಿಪುರ ಗ್ರಾಮದ ಸರ್ವೆ ನಂ.84/85 ರಲ್ಲಿ 4 ಎಕರೆ 4 ಗುಂಟೆ, ಬರಗೇನಹಳ್ಳಿ ಸರ್ವೆ ನಂ.5 ರಲ್ಲಿ 2 ಎಕರೆ, ಒಡ್ಡರದಿಬ್ಬ ಗ್ರಾಮದ ಸರ್ವೆ ನಂ.45/2 ರಲ್ಲಿ 2 ಎಕರೆ 11 ಗುಂಟೆ, ಗುಂಡೇನಹಳ್ಳಿ ಗ್ರಾಮದ ಸರ್ವೇ ನಂ.16 ರಲ್ಲಿ 2 ಎಕರೆ 37 ಗುಂಟೆ ಇದೆ ಎಂದರೇ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸರ್ವೆ ನಂ.84/85 ರಲ್ಲಿ 4 ಎಕರೆ 4 ಗುಂಟೆ ಶಿವಣ್ಣನವರ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.16 ರಲ್ಲಿ 2 ಎಕರೆ 37 ಗುಂಟೆಯಲ್ಲಿ ತಲಾ 39 ಗುಂಟೆ ಶಿವಣ್ಣನವರ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾತಿಯಾಗಿರುತ್ತದೆ ಎಂದರೆ ಸರಿ. ಶಾಂತಿಪುರ ಗ್ರಾಮದಲ್ಲಿ ಸರ್ವೆ ನಂ.84/85 ರಲ್ಲಿ 2 ಎಕರೆ ಜಮೀನು ಶಿವಣ್ಣನವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಶಿವಣ್ಣನವರಿಗೆ ಆಸ್ತಿ ಇದೆ ಒಟ್ಟು ಎಷ್ಟು ಇದೆ ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವ ಆಸ್ತಿಯು ಶಿವಣ್ಣನವರ ತಂದೆಯು ಶಿವಣ್ಣನವರಿಗೆ ದಿಃ 11-06-2007 ರಂದು ನೊಂದಾಯಿತ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆಂದರೆ ಸರಿ. ನಾವು ಮತ್ತು 1ನೇ ಪ್ರತಿವಾದಿಯ ಅಣ್ಣ ರೇವಣ್ಣನವರು

ಒಳ್ಳೆ ಬಾಂದವ್ಯದಲ್ಲಿದ್ದೇವೆ ಎಂದರೆ ಸರಿ. ರೇವಣ್ಣನವರಿಗೆ ಬರಗಹೇನಹಳ್ಳಿ ಗ್ರಾಮದ ಸರ್ವೆ ನಂ.5 ರಲ್ಲಿ 2 ಎಕರೆ, ಗುಂಡೆನಹಳ್ಳಿ ಗ್ರಾಮದ ಸರ್ವೆ ನಂ. ಹೊಸ 123 ರಲ್ಲಿ 39 ಗುಂಟೆ ಅಡಿಕೆ ತೋಟ ಮತ್ತು ವೆಂಕಟಾಪುರ ಗ್ರಾಮದಲ್ಲಿ ವಾಸದ ನಿಲಯವು ಅವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯಾದ ಮತ್ತೊಬ್ಬ ಸಹೋದರ ಕೃಷ್ಣಯ್ಯನಿಗೆ ಶಾಂತಿಪುರ ಗ್ರಾಮದ ಸರ್ವೇ ನಂ.84/85 ರಲ್ಲಿ 2 ಎಕರೆ 4 ಗುಂಟೆ, ಗುಂಡೇನಹಳ್ಳಿ ಗ್ರಾಮದ ಹಳೆ ಸರ್ವೇ ನಂ.16 , ಹೊಸ ಸರ್ವೇ ನಂ.123 ರಲ್ಲಿ 39 ಗುಂಟೆ ಮತ್ತು ವೆಂಕಟಾಪುರ ಗ್ರಾಮದಲ್ಲಿ ವಾಸದ ಮನೆಯು ಅವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ಗುಂಡೇನಳ್ಳಿ ಗ್ರಾಮದ ಸರ್ವೆ ನಂ 123 ರಲ್ಲಿ ಕೃಷ್ಣಯ್ಯನವರು 1 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಭದ್ರಾ ಮೇಲ್ದಂಡೆಗೆ ಸರ್ವೆ ನಂ.2 ರಲ್ಲಿ 2 ಎಕರೆ ಸರ್ಕಾರವು ವಶಪಡಿಸಿಕೊಂಡು ಪರಿಹಾರವನ್ನು ನೀಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವಣ್ಣನವರು ಶಿಕಾರಿಪುರದಲ್ಲಿ ಎಕ್ಸ್‌ಜ್ ಕಂಟ್ರಾಕ್ಟರ್ ಹತ್ತಿರ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವಣ್ಣನವರ ಕುಟುಂಬದಲ್ಲಿ 2001 ನೇ ಇಸವಿಯವರೆಗೂ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**